# ಅಂಗೈಯಲ್ಲಿ ಅರಮನೆ

## ಫಿಟ್ ಅಂಡ್ ಫೈನ್!..

ಸುಮಾರು ಹತ್ತು ವರ್ಷಗಳ ಹಿಂದೆ ಮನೆಯ ಕಾರ್ಯಕ್ರಮಕ್ಕೆ ನನ್ನ ಆಪ್ತ ಮಿತ್ರ ಹಾಗೂ ಅವರ ಕುಟುಂಬದ ಎಲ್ಲ ಸದಸ್ಯರನ್ನೂ ಆಹ್ವಾನಿಸಿದ್ದೆ. ಅಂದು ಅವರೊಂದಿಗೆ ಆತನ ಅಜ್ಜ– ಅಜ್ಜಿ ಬಂದಿದ್ದರು. ಆಗ ಅಜ್ಜನಿಗೆ ಸುಮಾರು ಎಂಬತ್ತು ವರ್ಷ ಆಗಿತ್ತೇನೋ. ಮಾತು ಮಾತಿನ ನಡುವೆ ಅವರು, 'see even at this age, I am fit and fine... ನನ್ನ ನೆನಪಿನ ಶಕ್ತಿಯೂ ಚೆನ್ನಾಗಿದೆ' ಎಂದು ಸೆಲ್ಫ್ ಬೂಸ್ಟ್ ಮಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿ ಕೇಳಿ ಅವರ ಪಕ್ಕದಲ್ಲಿದ್ದ ಅಜ್ಜಿ, ''ಗೊತ್ತು ಸುಮ್ನಿರಿ, ಆದಕ್ಕೇ ಏನೋ ಮಹಾರಾಯ್ರು... ದಿನದಲ್ಲಿ ಒಂದು ಬಾರಿಯಾದ್ರೂ 'ತಾವು ಯಾರು?' ಎಂದು ನನ್ನನ್ನ ಕೇಳ್ತೀರಿ'' ಎಂದು ಗೇಲಿ ಮಾಡಿದಾಗ ನಮಗೂ ಅಚ್ಚರಿ!



**ಅರವಿಂದ ಜಿ. ಜೋಷಿ**

---

## ತುಪ್ಪ ಬೇಕು... ತುಪ್ಪ...

ಅಪರೂಪಕ್ಕೆ ವಿಜಯನಗರದಲ್ಲಿರುವ ಗೆಳೆಯನ ಮನೆಗೆ ಹೋಗಿದ್ದೆ. ನಾವು ಇನ್ನೇನು ಮಾತುಕತೆ



ಶುರು ಮಾಡಬೇಕು..ಅಷ್ಟರಲ್ಲಿ ನಾಲ್ಕು ವರ್ಷದ ಅವನ ಮೊಮ್ಮಗ 'ತುಪ್ಪ ಬೇಕು... ತುಪ್ಪ...' ಎಂದು ಒಂದೇ ಸಮನೆ ಹಟ ಮಾಡತೊಡಗಿದ. ಮನೆಯವರೆಲ್ಲಾ ಏನು ಪ್ರಯತ್ನ ಮಾಡಿದರೂ ಅವನನ್ನು ಸಮಾಧಾನ ಮಾಡಲು ಆಗುತ್ತಿರಲಿಲ್ಲ. ಮನೆಯಲ್ಲಿರುವ ಚಾಕೊಲೇಟು, ಬಿಸ್ಕತ್ತುಗಳನ್ನೆಲ್ಲಾ ಅವನ ಮುಂದೆ ತಂದು ಹಾಕಿದರೂ ಅವನ ತುಪ್ಪದ ಅಳು ನಿಲ್ಲಲಿಲ್ಲ. ಕೊನೆಗೆ ನಾನು ಸುಮ್ಮನಿರಲಾರದೆ, 'ಪಾಪ ಮಗು ಅಷ್ಟೊಂದು ಕೇಳ್ತಾ ಇದೆ. ಒಂದೆರಡು ಚಮಚ ತುಪ್ಪ ಕೊಡೋದಲ್ವೆ?' ಎಂದೆ. ಅದಕ್ಕೆ ಗೆಳೆಯ ನಗುತ್ತ, 'ಅಯ್ಯೋ ಅವನು ಕೇಳ್ತಾ ಇರೋದು ಆ ತುಪ್ಪ ಅಲ್ಲ ಮಾರಾಯ. ಅವನು ತನ್ನ ಚಿಕ್ಕಪ್ಪನನ್ನು ತುಪ್ಪ ಅಂತ ಕರೀತಾನೆ. ಅವನ ಚಿಕ್ಕಪ್ಪ ಈಗ ಆಫೀಸಿಗೆ ಹೋಗಿದ್ದಾನೆ. ಎಲ್ಲಿಂದ ತರೋದು?' ಎಂದ. ಬೆಪ್ಪಾಗುವ ಸರದಿ ನನ್ನದಾಗಿತ್ತು.

**ಎಂ.ಕೆ.ಮಂಜುನಾಥ್**